ಬೇರೆ ರೀತಿಯಲ್ಲಿ ಕೆಲವು ವಿಚಾರಗಳನ್ನು ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಾ ಇದೆ.

ಈ ಶಾಲಾ ಉಪಾಧ್ಯಾಯರ ವಿಚಾರದಲ್ಲಿ 109 ಶಾಲೆಗಳಲ್ಲಿ ಹೆಚ್ಚುವರಿ ಅಧ್ಯಾಪಕರು ಸುಮಾರು 206 ಮಂದಿ ಇದ್ದಾರೆ.ಇವರನ್ನು ಎಲ್ಲಿ ಶಾಲಾ ಅಧ್ಯಾಪಕರ ಕೊರತೆ ಇದೆ ಅಲ್ಲಿಗೆ ಪುನಃ ರೀಅಡ್ಜಸ್ಟ್ ಮಾಡಿ ವರ್ಗಾವಣೆ ಮಾಡುತ್ತೇವೆ.

ಶ್ರೀ ಕೆ. ಲಕ್ಷ್ಮಣ್ಣ : ರಾಜಾಜಿನಗರದಲ್ಲಿರುವ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳಿಲ್ಲ ಪೀಠೋಪಕರಣಗಳಿಲ್ಲ. ಈ ಬಗ್ಗೆ ಕಳೆದ ವರ್ಷದಿಂದ ನಾನು ಕಾಗದ ಬರೆದಿದ್ದೇನೆ. ಕೆಲವು ಪ್ರೈಮರಿ ಶಾಲೆಗಳಲ್ಲಿ ಮಣೆಗಳೂ ಇಲ್ಲ. ಅಲ್ಲಿ ಶಾಲಾ ಅಭಿವೃದ್ಧಿ ಸಮಿತಿ ಇದೆ. ಅವರು ಆರ್ಥಿಕವಾಗಿ ಹಿಂದುಳಿದವರು. ಅವರು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಅಂತಹ ಕಡೆ ಸೌಲಭ್ಯ ಒದಗಿಸುವುದು ಸರ್ಕಾರದ ನೀತಿ ಆಗಿರಬೇಕು. ಕರ್ತವ್ಯವಾಗಿರಬೇಕು. ಅಲ್ಲಿ ಓದತಕ್ಕ ಬಡಮಕ್ಕಳು, ಹರಿಜನ - ಗಿರಿಜನರ ಮಕ್ಕಳಿಗೆ ಮಣೆ ಸಹ ಇಲ್ಲ ಎಂದರೆ ಇದು ಯಾವ ಕಾರ್ಯಕ್ರಮ ಎಂದು ಮಾನ್ಯ ಸಚಿವರು ಹೇಳಬೇಕು. ಕೆಲವು ಪ್ರೌಢಶಾಲೆಗಳಲ್ಲಿ ವರ್ಷಾನುಗಟ್ಟಲೆ ಕೆಲವು ಸಬ್ಜೆಕ್ಟ್ ಟೀಚರ್‌ಗಳಿಲ್ಲ. ಅವರನ್ನು ಹಾಕಿಕೊಂಡಿ ಎಂದು ಸಂಬಂಧಿಸಿದವರನ್ನು ಕೇಳಿದರೆ ಇನ್ನೂ ಹಾಕಿಕೊಟ್ಟಿಲ್ಲ. ಹೆಣ್ಣೂರು ಬಾಣಸವಾಡಿಯ ಒಂದು ಸರ್ಕಾರಿ ಪ್ರೈಮರಿಶಾಲೆ ಶಾಲೆಯಲ್ಲಿ 8 ಮಕ್ಕಳಿಗೆ ಇಬ್ಬರು ಉಪಾಧ್ಯಾಯರಿದ್ದಾರೆ. ಅವರು ಸುಮ್ಮನೆ ಸಂಬಳ ತೆಗೆದುಕೊಳ್ಳುವಂತಾಗಿದೆ. ಕಡಿಮೆ ಇರುವಂಥ ಮಕ್ಕಳನ್ನು ಬೇರೆ ಕಡೆ ವರ್ಗಾಯಿಸಬೇಕು. ಈ ಟೀಚರ್‌ಗಳನ್ನು ಬೇರೆ ಶಾಲೆಗಳಿಗೆ ಹಾಕಿದರೆ ಉತ್ತಮ. ಈ ಬಗ್ಗೆ ಕಾಗದ ಬರೆದರೂ ಸರಿಪಡಿಸಿಲ್ಲ

(ಉತ್ತರ ಇಲ್ಲ)

ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಬಗ್ಗೆ

121 ಶ್ರೀ ಬ್ಲೆಸಿಯಸ್ ಎಂ. ಡಿಸೋಜಾ (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?*

ಆ) *ಪ್ರತಿಯೊಂದು ಕಾಲೇಜಿನಲ್ಲಿ 1988-89 1989-90 ಮತ್ತು 1990-91ನೇ ಸಾಲಿಗೆ ಇರುವ ಸೀಟುಗಳ ಸಂಖ್ಯೆ ಎಷ್ಟು?*

ಇ) *ಪ್ರತಿಯೊಂದು ವೈದ್ಯಕೀಯ ಕಾಲೇಜಿಗೆ ಸೇರಿರುವ ಆಸ್ಪತ್ರೆಯ ಹೆಸರಿನೊಂದಿಗೆ ಇರುವ ಹಾಸಿಗೆ ಸಾಮರ್ಥ್ಯದ ಸಂಖ್ಯೆ ಎಷ್ಟು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು)

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳು - 4

ಖಾಸಗಿ ವೈದ್ಯಕೀಯ ಕಾಲೇಜುಗಳು 14

ಒಟ್ಟು 18

ಆ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿದೆ.

ಇ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿದೆ.

LIST OF THE NUMBER OF MEDICAL SEATES IN GOVERNMENT AND PRIVATE MEDICAL COLLEGES DURING THE YEAR 1988-89, 89-90 and * (1990-91)

	Name of the Medical Colleges	*1988-89*	*1989-90*	*1990-91*
	GOVT MEDICAL COLLEGES:			
1.	Bangalore Medical College, Bangalore.	155	200	200
2.	Mysore Medical College, Mysore.	135	175	175
3.	Bellary Medical College, Bellary.	130	130	130
4.	Karnataka Medical College, Hubli	130	130	130
	PRIVATE MEDICAL COLLEGES:			
1.	K.M.C. Mangalore	250	250	350
2.	K.M.C. Manipal	250	250	250
3.	St. John's Medical College, Bangalore.	60	60	60
4.	J.N. Medical College, Belgaum	175	175	175
5.	M.R. Medical College, Gulbarga	228	150	175
6.	J.J.M. Medical College, Davangere.	270	300	300
7.	M.S. Ramaiah Medical College, Bangalore	100	100	100
8.	Kempegowda Institute of Medical Science B'lore.	50	50	100
9.	Dr. B.R. Ambedkar Medical College, Bangalore	50	50	100
10.	Al Ameen Medical College, Bijapur	125	125	120
11.	J.S.S. Medical College, Mysore	150	200	200
12.	Adichunchangiri Institute of Medical Science, Bellur	150	175	175
13.	B.L.D.T.S. Medical College, Bijapur	160	160	160
14.	Sri Devaraj Urs Medical College, Tamka, Kolar.	150	140	150
15.	Sri Siddartha Medical College, Tumkur.	150	150	175

LIST OF BEL STRENGTH OF THE HOSPITAL ATTACHED TO EACH MEDICAL COLLEGES.

Sl. No.	*Name of the College*	*Name of the Hospital attached to Medical College*	*No. of Beds Strength*
1.	Kasturba Medical College, Manipal	K.M.C. Hospital, Manipal	1751
2.	-do- Mangalore	1. District Wenlock Hospital, M'lor 2. Lady Goshan Hospital, Mangalore 3. T.B. Hospital, Mudshedele 4. Dr. T.M.A. Pai Hospital, Bijai 5. Dr. T.M.A. Pai Hospital and Research Centre, Attavar.	655 250 100 400 500
3.	M.R. Medical College, Gulbarga	1. District Hospital, Gubarga 2. Basaveswara Hospital, Gulbarga 3. Sangameshwara Hospital	700 250 100
4.	J.N. Medical College, Belgaum	1. District Hospital, Belgaum 2. K.L.E. Hospital, Belgaum	740 265
5.	M.S. Ramaiah Medical College, Bangalore	M.S. Ramaiah Hospital, Bangalore	875
6.	J.J.M. Medical College, Davangere	1. C.G. Hospital, Davangere 2. Women & Children Hospital, Davangere 3. TB Hospital, Davangere 4. Bapuji Hospital, Davangere	950 100 60 523
7.	St. Jon's Medical College, Bangalore.	St. John's Hospital, Bangalore	800
8.	Kempegowda Inst. of Medical Sciences, Bangalore	1. Jayanagar General Hospital, Bangalore. 2. K.I.M.S. Hospital, Bangalore.	200 339
9.	B.L.D.E. Medical College, Bijapur	B.L.D.E. Hospital, Bijapur	360
10.	J.S.S. Medical College, Mysore	J.S.S. Medical College Hospital, Mysore S.M.T. Hospital, Mysore	760 50
11.	Al-Ameen Medical College, Bijapur	District Hospital, Bijapur	440
12.	Sri Siddartha Medical College, Tumkur	District Hospital, Tumkur Siddartha Medical College Hospital & Research Centre	325 150

13.	Adichunchangiri Institute of Medical Science, Bellur	District Hospital, Mandya Adichunchanagiri Hospital	398 300
14.	Sri Devaraj Urs Medical College, Kolar	1) S.N.R. Hospital, Kolar 2) CIvil Hospital, K.G.F. 3) K.N.T.B. Hospital, Kolar	260 260 40
15.	Dr. B.R. Ambedkar Medical College, Bangalore.	K.C.G. Hospital, Bangalore Ambedkar Medical College Hospital, Bangalore.	453 270

ಶ್ರೀ ಬ್ಲೇಸಿಯಸ್ ಡಿ. ಸೌಜ : ಅಧ್ಯಕ್ಷರೇ, 1988-89ರಲ್ಲಿ 245 ಹೆಚ್ಚುವರಿ ಸೀಟುಗಳನ್ನು 14 ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಕೊಟ್ಟಿದ್ದಾರೆ. 1989-90ರಲ್ಲಿ 190 ಸೀಟುಗಳನ್ನೂ ಹಾಗಯೇ 1990-91ರಲ್ಲಿ 185 ಸೀಟುಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಅಂದರೆ ಒಟ್ಟು 620 ಜಾಸ್ತಿ ಕೊಟ್ಟಂತಾಯಿತು. ಈ ಪ್ರೈವೈಟ್ ಮೆಡಿಕಲ್ ಕಾಲೇಜುಗಳು ಯಾವ ರೀತಿ ನಡೆಯುತ್ತಿವೆ ಕ್ಯಾಪಿಟೇನ್ ಫೀಸ್ ತೆಗೆದುಕೊಳ್ಳುತ್ತೇವೆ. ಎಂಬುದು ಎಲ್ಲರಿಗೂ ಗೊತ್ತು. ಇದರ ಬದಲು ಒಳ್ಳೆಯ ಆಸ್ಪತ್ರೆಗಳನ್ನು ಹೊಂದಿರುವ ಮೆಡಿಕಲ್ ಕಾಲೇಜುನವರು ಕೇಳಿದರೆ ಅವರಿಗೆ ಕೊಡಲಿಲ್ಲ. ಅಷ್ಟೇ ಅಲ್ಲ, 2540 ಸೀಟ್ಸ್ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿದ್ದು ಅದರಲ್ಲಿ ಎಷ್ಟನ್ನು ಮೆರಿಟ್‌ಗೆ ಕೊಡಲಾಗಿದೆ ಎಂದು ಸಚಿವರು ಹೇಳಬೇಕು. ಮಾತ್ರವಲ್ಲ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಸ್ಪತ್ರೆಗಳಿರುವುದರಿಂದ ಮೆಡಿಕಲ್ ಕಾಲೇಜ್ ತೆರೆಯಲು ಎಷ್ಟು ಅರ್ಜಿಗಳು ಬಂದಿವೆ ಎಂದು ಸಚಿವರು ಹೇಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅದಕ್ಕೆ ಪ್ರತ್ಯೇಕ ನೋಟೀಸ್ ಬೇಕು. ನೋಟಿಸ್ ಕೊಟ್ಟರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಸಚಿವರು ಸಮಯ ಕೇಳಿದ್ದಾರೆ. ಅದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಾಧರ್ ಮುಲ್ಲರ್ ಎಂಬ ಆಸ್ಪತ್ರೆ 110 ವರ್ಷಗಳಿಂದ ನಡೆದು ಬಂದಿದೆ. ಅಲ್ಲಿ 750 ಬೆಡ್ಸ್ ಇವೆ. 100 ವರ್ಷದ ಲೆಪ್ರಿಸಿ ಆಸ್ಪತ್ರೆ ಇದೆ. ಅವರು ಮೆಡಿಕಲ್ ಕಾಲೇಜನ್ನು ಕೇಳಿದ್ದಾರೆ. ಅವರಿಗೆ ಮೆಡಿಕಲ್ ಕಾಲೇಜನ್ನು ಸ್ಯಾಂಕ್ಷನ್ ಮಾಡುತ್ತೀರ ಎಂದು ಕೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮೆಡಿಕಲ್ ಕಾಲೇಜ್ ಮತ್ತು ಫಾರ್ಮಸಿ ಕಾಲೇಜುಗಳು ನೋಡುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಮಿ ಮಾಡಿದ್ದಾರೆ ಅದರ ಮುಂದೆ ಇದೆಲ್ಲ ಬಂದು, ಅದರ ಪ್ರಕಾರ ನಿರ್ಣಯ ತೆಗೆದುಕೊಳ್ಳಲಾಗುತ್ತದೆ.

ಶಿಕ್ಷಣ ಸಂಸ್ಥೆಗಳಲ್ಲಿ ರೇಷ್ಮೆ ಕೃಷಿಯನ್ನು ವೃತ್ತಿಯ ಶಿಕ್ಷಣವನ್ನಾಗಿ ಅಳವಡಿಸುವುದು

482 - ಶ್ರೀ ಎಸ್.ಆರ್. ಮೋರೆ. (ಧಾರವಾಡ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೃತ್ತಿ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಕಲಿಸಲು ಉದ್ದೇಶಿಸಿರುವುದು ನಿಜವೇ?

ಆ) ರೇಷ್ಮೆ ಕೃಷಿಯನ್ನು ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸಲು ಅಗತ್ಯ ಸಹಾಯ ಧನವಿತ್ತು ಮಂಜೂರು ಮಾಡುವ ಉದ್ದೇಶವಿದೆಯೇ?

ಇ) ಸ್ವಾವಲಂಬಿಯಾಗಲು ಹೆಚ್ಚು ಪ್ರಯೋಜನಕಾರಿಯಾದ ಈ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಅನುಕೂಲತೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿಗಳು) :